ಸಾಕ್ಷಿಯನ್ನು ದಿನಾಂಕಃ **16-07-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಜಿ ಪಿ ಹೆಚ್., ವಕೀಲರಿಂದಃ**

ನನ್ನ ಮೂಲ ಊರು ತಡಾಣಿಯಾಗಿರುತ್ತದೆ. ನನ್ನ ತಂದೆಯವರು ಶಿರಕೂರು ಗ್ರಾಮದ ಗದ್ದೆಮನೆಯಲ್ಲಿ ಉಳಿದುಕೊಂಡಿದ್ದರು. ನನ್ನ ತಂದೆಯವರು 5 ಜನ ಅಣ್ಣ-ತಮ್ಮಂದಿರು. ನನ್ನ ತಂದೆ ಹಾಗೂ ಅವರ ಸಹೋದರರ ನಡುವೆ ವಿಭಾಗವಾಗಿತ್ತು. ನನ್ನ ತಂದೆ ಹಾಗೂ ಅವರ ಸಹೋದರರು ವಿಭಾಗ ಪತ್ರ ಮಾಡಿಕೊಂಡಿದ್ದರೇ ಎಂದು ನನಗೆ ತಿಳಿದಿಲ್ಲ. 1980 ರಿಂದ 1986 ರ ಒಳಗಡೆ ನನ್ನ ತಂದೆ ಹಾಗೂ ಸಹೋದರರ ನಡುವೆ ವಿಭಾಗ ಪತ್ರ ಆಗಿದ್ದು ಇರಬಹುದು. ನನ್ನ ತಂದೆಯ ಸಹೋದರರಿಗೆ ಗದ್ದೆಮನೆಯಲ್ಲಿ ಆಸ್ತಿ ಕೊಟ್ಟಿದ್ದಾರೆ. ಉಳಿದವರಿಗೆ ತಡಾಣಿ ಮತ್ತು ಕಣ್ಣಿಮನೆಯಲ್ಲಿ ಕೊಟ್ಟಿದ್ದಾರೆ. ಸಾಕ್ಷಿಗೆ ದಾವಾ ಪರಿಶಿಷ್ಟದಲ್ಲಿ ತೋರಿಸಿದ ಆಸ್ತಿಗಳು ನಿಮ್ಮ ಅಜ್ಜನಿಂದ ಬಂದದ್ದೇ ಎಂದರೆ, ಸ.ನಂ.193 ಅದು ನಾನು ಅಮೇರಿಕಾದಲ್ಲಿ ಇದ್ದಾಗ ನನ್ನ ತಂದೆಯ ಹೆಸರಿನಲ್ಲಿ ನಾನು ಹಣ ಕೊಟ್ಟು ಖರೀದಿಸಿದ್ದು ಎಂದು ನುಡಿದಿರುತ್ತಾರೆ. ಸ.ನಂ.32 ಹಾಗೂ 34 ಇವು ಪಿತಾರ್ಜಿತ ಆಸ್ತಿಗಳು. ಸ.ನಂ.193 ಅದು ನಾನು ಅಮೇರಿಕಾದಲ್ಲಿ ಇದ್ದಾಗ ನನ್ನ ತಂದೆಯ ಹೆಸರಿನಲ್ಲಿ ನಾನು ಹಣ ಕೊಟ್ಟು ಖರೀದಿಸಿದ್ದು ಎಂದು ಈ ದಾವಾ ದಾಖಲಿಸುವಾಗ ನನ್ನ ವಕೀಲರಿಗೆ ಮಾಹಿತಿ ನೀಡಿದ್ದು



ಇರುವುದಿಲ್ಲ. ಅದರಲ್ಲಿ ನನ್ನ ತಮ್ಮನಿಗೆ ಪಾಲು ಕೊಡಲು ನನ್ನ ತಕರಾರು ಇಲ್ಲ. ಶಿರಕೂರು ಗ್ರಾಮದ ಗದ್ದೆಮನೆಯಲ್ಲಿ ಮೂಲ ಮನೆ ಇದೆ. ಆ ಮನೆಯನ್ನು ಈ ದಾವೆಯಲ್ಲಿ ಕಾಣಿಸಿರುವುದಿಲ್ಲ. ಆ ಮೂಲ ಮನೆ ಈಗಲೂ ಇದೆ. ಮೂಲ ಮನೆಯಲ್ಲಿ ನನ್ನ ತಮ್ಮನಿಗೆ ಪಾಲು ಇರುವುದಿಲ್ಲ. ಮೂಲ ಮನೆಯಲ್ಲಿ ನನ್ನ ತಮ್ಮ ನನಗೆ ಬಿಟ್ಟುಕೊಟ್ಟಿರುವುದಿಲ್ಲ. ತಮ್ಮನಿಗೆ ಇರುವ ಮತ್ತೊಂದು ಮನೆ ಫಾರೆಸ್ಟ ಜಾಗದಲ್ಲಿ ಇದೆ. ಅದಕ್ಕೆ ಮನೆ ನಂಬರ್ ಇಲ್ಲ. ಮತ್ತೊಂದು ಮನೆ ಇಲ್ಲ ಎಂದರೆ ಸರಿಯಲ್ಲ. ಮೂಲ ಮನೆ ನಂ.32 ಇದನ್ನು ಒಳಹಾಕುವ ದುರುದ್ದೇಶದಿಂದ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ಬಹಳಷ್ಟು ಬಂಗಾರವನ್ನು ಮಾಡಿರಲಿಲ್ಲ, ಕೆಲವು ಬಂಗಾರ ಮಾಡಿದ್ದರು, ಅದನ್ನು ನನ್ನ ತಮ್ಮನಿಗೆ ಕೊಟ್ಟಿದ್ದಾರೆ. ತಮ್ಮನಿಗೆ ಯಾವಾಗ ಬಂಗಾರವನ್ನು ನೀಡಿದ್ದಾರೆಂದು ಗೊತ್ತಿಲ್ಲ. ಬಂಗಾರದ ಕರಿಮಣಿ ಸರ 3 ತೊಲೆ, ಒಂದು ಕುಡುಕು ಜೋಡಿ, ಮೂಗುತಿ 1 ತೊಲೆ, ಎರಡು ಬಂಗಾರದ ಬಳೆ 3 ತೊಲೆ, ಬಂಗಾರದ ಚೈನು 2 ತೊಲೆ, ಕಂಚಿನ ಪಾತ್ರೆ 6, ಹಿತ್ತಾಳೆ ಪಾತ್ರೆ 10, 50 ಸಾವಿರಕ್ಕೂ ಮಿಕ್ಕಿ ಬೆಲೆ ಇರುವ ಪಾತ್ರೆ ಪಗಡೆಗಳು ಇತ್ತು ಎಂದರೆ ತಾಮ್ರದ 2 ಪಾತ್ರೆ ಇತ್ತು ಎಂದು ನುಡಿದಿರುತ್ತಾರೆ. ಇದರಲ್ಲಿ ನೀವು ಬ್ಯಾಂಕಿನಲ್ಲಿ ಅಡವಿಟ್ಟಿದ್ದೀರಿ ಎಂದರೆ ಸಾಕ್ಷಿಯು ನನ್ನ ತಂದೆಯವರು ಅದನ್ನು ಬ್ಯಾಂಕಿನಲ್ಲಿ ಅಡವಿಟ್ಟಿದ್ದರು ಎಂದು

ನುಡಿದಿರುತ್ತಾರೆ. ಈ ಬಂಗಾರವನ್ನು ಬಿಡಿಸಿಕೊಂಡು ಹೋಗಿ ಎಂದು ಬ್ಯಾಂಕಿನಿಂದ ನೋಟೀಸು ಬಂದಿತ್ತೇ ಎಂದರೆ ಅದು ತಂದೆಯವರಿಗೆ ಬಂದಿತ್ತು ಹಾಗೂ ನಂತರ ಬ್ಯಾಂಕಿನವರು ನನಗೆ ಹಾಗೂ ನನ್ನ ತಮ್ಮನಿಗೆ ಮಾತುಕತೆಯ ಮೂಲಕ ಅದನ್ನು ಬಿಡಿಸಿಕೊಂಡು ಹೋಗಿ ಎಂದು ತಿಳಿಸಿದ್ದರು ಎಂದು ನುಡಿದಿರುತ್ತಾರೆ. ಅದನ್ನು ಹೋದ ವರ್ಷ ವಿಲೆವಾರಿ ಮಾಡಿರುತ್ತಾರೆ ಹಾಗೂ ಇದರ ಬಗ್ಗೆ ಪೇಪರ್ ಅಡ್ವಟೈಸಮೆಂಟ್ ಕೊಟ್ಟಿದ್ದರು ಎಂದು ಹೇಳಿದ್ದರು. ಬಂಗಾರವನ್ನು ಎಸ್ ಬಿ ಐ, ಕುದ್ರಗಿ ಶಾಖೆಯಲ್ಲಿ ಇಟ್ಟಿದ್ದರು. ಇದನ್ನು ವಿಲೆವಾರಿ ಮಾಡಿದ ಬಗ್ಗೆ ನಾನು ಬ್ಯಾಂಕಿಗೆ ಕೇಳಲು ಹೋಗಿಲ್ಲ. 2024 ರಲ್ಲಿ ನಾನು ಈ ಬಗ್ಗೆ ಕೇಳಲು ಹೋಗಿದ್ದೆ. 2.65 ಲಕ್ಷಕ್ಕೆ ವಿಲಾವಾಗಿ ಆಗಿ ಹೋಗಿದೆ ಎಂದು ನುಡಿದಿರುತ್ತಾರೆ. ಆ ಬಗ್ಗೆ ಅಧಿಕೃತ ಮಾಹಿತಿಯನ್ನು ಪಡೆದಿಲ್ಲ. ನಮ್ಮ ತಂದೆಯವರು 1 ಲಕ್ಷದ 25 ಸಾವಿರ ಸಾಲ ಪಡೆದಿದ್ದರು. ಅದು 2 ಲಕ್ಷ 65 ಸಾವಿರ ಹಣಕ್ಕೆ ವಿಲಾವಾಗಿದೆ. ಸಾಲದ ಮೊತ್ತ 1 ಲಕ್ಷದ 65 ಸಾವಿರ ಇತ್ತು. ಅದರ ವ್ಯತ್ಯಾಸ ಇರುವ ಮೊತ್ತವನ್ನು ಬ್ಯಾಂಕಿನ ಬಳಿ ನಾನೇನು ಕೇಳಲು ಹೋಗಿರುವುದಿಲ್ಲ. ಈ ಎಲ್ಲಾ ಬಂಗಾರವು ನನ್ನ ತಾಬಾ ಇದೆ ಎಂದರೆ ಸರಿಯಲ್ಲ. ಅದು ಬ್ಯಾಂಕಿನಲ್ಲಿ ವಿಲಾವಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ–ತಾಯಿ ರವರು ಸಾಯುವ ಕಾಲಕ್ಕೆ ನನ್ನ ಬಳಿ ಇದ್ದರು. ನನ್ನ ತಮ್ಮ ಬೇರೆ ಕಡೆ ಸಂಸಾರ ಮಾಡುತ್ತಿದ್ದ. ನನ್ನ ತಂದೆಗೆ ನನ್ನ ತಮ್ಮನನ್ನು ಕಂಡರೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಅಮೇರಿಕಾದಿಂದ ಬಂದ ನಂತರ ತಂದೆಯ ಬಳಿ ಇರುವ ಬಂಗಾರವನ್ನು ನಾನು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**–Sd–**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**